ಪಿ.ಸಿ.ಆರ್. 01/2021
()

# ಸಾಕ್ಷಿಯ ಪ್ರಾಮಾಣಿಕೃತ ಹೇಳಿಕೆ

**ಸಾಕ್ಷಿಯನ್ನು ಇಂದು ದಿನಾಂಕ 23.03.2022 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ**

ನಾನು ಮತ್ತು ಎದುರುದಾರ 2015 ರಲ್ಲಿ ಟ್ರಾನ್ಸಪೋರ್ಟ ಬಿಜಿನೆಸ್ ಮಾಡುತ್ತಿದ್ದು ಇತ್ತು. 2018 ರಲ್ಲಿ ನಾನು ಒಂದು ಕವರದಲ್ಲಿ ಚಕ್ ನಂ.501431 ನ್ನೆದ್ದನ್ನು ಸಹಿ ಮಾಡಿ ಇಟ್ಟಿದ್ದು ಇರುತ್ತದೆ. ನಂತರ ಸದರಿ ಚಕ್ಕು ನನಗೆ ಸಿಕ್ಕಿದ್ದು ಇರುವುದಿಲ್ಲ. ಆಗ ನಾನು ನಮ್ಮ ಸಿಬ್ಬಂದಿಗೆ ಮತ್ತು ಎದುರುದಾರರಿಗೆ ಕೇಳಿದ್ದು ಆಗಲು ಸಹ ಚಕ್ಕು ದೊರೆತ್ತಿರುವುದಿಲ್ಲ. 2019 ರಲ್ಲಿ ನಂತರ ಎದುರುದಾರರು ನಮ್ಮ ವ್ಯವಹಾರದಲ್ಲಿ ಸ್ವಇಚ್ಚೆಯಿಂದ ನಿರ್ಧಾರ ತೆಗೆದುಕೊಳ್ಳಲು ಪ್ರಾರಂಭಿಸಿದ್ದು ಇರುತ್ತದೆ. ನಮ್ಮ ವ್ಯಾಪಾರ ಲಾಸ್ ಆಗಿದ್ದರಿಂದ ನಮ್ಮ ಮತ್ತು ಎದುರುದಾರರ ನಡುವೆ ಹೊಂದಾಣಿಕೆ ಆಗಲಿಲ್ಲ. ಆಗ ಎದುರುದಾರ 2020 ನೆ ಸಾಲಿನಲ್ಲಿ ಪಾಲುಗಾರಿಯಲ್ಲಿ ಬರುವ ಲಾಭವನ್ನು ನೀಡುವಂತೆ ಕೇಳಿರುತ್ತಾನೆ. ಆಗ ನಾನು ಲೆಕ್ಕ ಮಾಡಿ ಲಾಭ ನೀಡಿರುತ್ತೇನೆ. ಆಗ ಎದುರುದಾರರು 2021 ರಲ್ಲಿ ಬೇರೆ ಟ್ರಾನ್ಸಪೋರ್ಟ ಆಫೀಸ್ ಮಾಡಿರುತ್ತಾರೆ. ಆದಾದ ನಂತರ ಎದುರುದಾರರು ನಮ್ಮ ಅಷ್ಟು ಪಾಲುದಾರಿಗೆ ನೋಟಿಸು ನೀಡಿದ್ದು ಅದಕ್ಕೆ ನಾವು ಉತ್ತರ ನೀಡಿರುತ್ತೇವೆ. ನೋಟಿಸಿನ ಮಾಹಿತಿ ಸುಳ್ಳು ಇರುತ್ತವೆ. ನಂತರ ಮಲ್ಲನಗೌಡ ವಕೀಲರಿಂದ ಒಂದು ನೋಟಿಸು ಬಂದಿರುತ್ತದೆ ಆಗ ನಾನು ಗಾಬರಿಗೊಂಡಿರುತ್ತೇನೆ. ಆಗ ನಾನು ಪೊಲೀಸ ಠಾಣೆಗೆ ಹೋಗಿ ದೂರು ನೀಡಲು ಪ್ರಯತ್ನಪಟ್ಟಿದ್ದು ಆದರೆ ಪೊಲೀಸರು ದೂರು ಪಡೆದುಕೊಂಡಿಲ್ಲ. ಆದರೂ ಸಹ ನಾನು ಪೊಲೀಸ ಠಾಣೆಗೆ ಪೋಸ್ಟ ಮೂಲಕ ದೂರು ಸಲ್ಲಿಸಿರುತ್ತೇನೆ. ಆಗ ಪೊಲೀಸರು ಸದರಿ ಪ್ರಕರಣ ಸಿವಿಲ್ ಸ್ವರೂಪದು ಇದ್ದು ನ್ಯಾಯಾಲಯಕ್ಕೆ ಹೋಗುವಂತೆ ತಿಳಿಸಿರುತ್ತಾರೆ. ಎದುರುದಾರರು ನನಗೆ ನಂಬಿಕೆ ದ್ರೋಹ, ವಿಶ್ವಾಸ ದ್ರೋಹ ಮಾಡಿ ಚಕ್ಕನಲ್ಲಿ ಅವರ ಹೆಸರು ಮತ್ತು ಹಣ ಬರೆದಿರುತ್ತಾರೆ. ಅದೇ ರೀತಿ ಚಕ್ಕನ್ನು ಕಳ್ಳತನ ಮಾಡಿ ನನ್ನ ವಿರುದ್ದ ಚಕ್ಕಬೌನ್ಸ ಕೇಸ ಹಾಕಿರುತ್ತಾರೆ. ಎದುರುದಾರ ನನಗೆ ಮೋಸ, ವಂಚನೆ ಮಾಡಿರುತ್ತಾರೆ. ಆದ್ದರಿಂದ ನಾನು ಈ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿರುತ್ತೇನೆ. ನಾನು 2018 ರಿಂದ ಇಲ್ಲಿಯವರೆಗೂ ವಿಶ್ವಾಸದಿಂದ ಏನು ಕ್ರಮ ಕೈಗೊಳ್ಳದೇ ಹಾಗೇ ಸುಮ್ಮನೆ ಇದ್ದೆ.

ಎದುರುದಾರ ನನ್ನ ವಿರುದ್ದ ಸಲ್ಲಿಸಿದ ಖಾಸಗಿ ಪಿರ್ಯಾಧಿಯ ದೃಡಿಕೃತ ನಕಲನ್ನು ನ್ಯಾಯಾಲಯದಿಂದ ಪಡೆದುಕೊಂಡು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-1 ಎಂದು, ಚಕ್ಕನ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-2 ಎಂದು, ಚಕ್ಕಿನ ಕುರಿತು ರಿಟರ್ನ ಮೇಮೋ ಇದರ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-3 ಎಂದು, ನಮ್ಮ ಎರಡು ಪಾಲುಗಾರಿಕೆ ಸಂಸ್ಥೆಯ ನೋಂದಣಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-

4 ಮತ್ತು 5 ಎಂದು, ನಮ್ಮ ನ್ಯಾಯವಾಧಿಗಳು ದಿನಾಂಕ 31.08.2020 ರಂದು ನೀಡಿದ ನೋಟಿಸಿನ ಉತ್ತರ ಪ್ರತಿಯ ಕಚೇರಿ ಪ್ರತಿ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–6 ಎಂದು, ಶ್ರೀ ಮಲ್ಲನಗೌಡ ವಕೀಲರಿಗೆ ನೀಡಿದ ನೋಟಿಸಿಗೆ ಉತ್ತರದ ಪ್ರತಿಯ ಕಚೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–7 ಎಂದು, ನಾಲ್ಕು ಅಂಚೆ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ–8 ರಿಂದ 11 ಎಂದು, ನಾಲ್ಕು ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-12 ರಿಂದ 15 ಎಂದು, ನಾನು ಎದುರುದಾರರನ್ನು ಮತ್ತು ನಮ್ಮ ಇತರ ಪಾಲುದಾರರನ್ನು ನಿವೃತ್ತಗೊಳಿಸಿದ ಕುರಿತು ಸಬ್ ರಿಜೇಷ್ಟರ ಇವರಲ್ಲಿ ಡಿಡ್ ನೋಂದಾಯಿಸಿಕೊಂಡಿರುತ್ತೇನೆ. ನನ್ನ ವೈಯಕ್ತಿಕ ಬ್ಯಾಂಕ ಖಾತೆಯ Statement of account ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–16 ಎಂದು, ಎದುರುದಾರ ದಿನಾಂಕ 18.08.2020 ರಂದು ನನಗೆ ಮತ್ತು ಇತರ ಪಾಲುದಾರರಿಗೆ ನೀಡಿದ ನೋಟಿಸಿನ ಮೂಲ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–17 ಎಂದು, ಶ್ರೀ ಮಲ್ಲನೌಡ ಎಸ್. ವಕೀಲರು ನೀಡಿದ ನೀಡಿದ ನೋಟಿಸಿನ ಮೂಲ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–18 ಎಂದು, ಪೊಲೀಸ ಸಬ್ ಇನ್ಸಪೆಕ್ಟರ ಸೇಡಂ ಪೊಲೀಸ ಠಾಣೆಗೆ ನೀಡಿದ ದೂರಿನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ–19 ಎಂದು ಗುರುತಿಸಲಾಯಿತು. ನಾನು ಎದುರುದಾರರ ಹತ್ತಿರ ಯಾವುದೇ ಹಣ ಪಡೆದಿರುವುದಿಲ್ಲ. ನಾನು ಎದುರುದಾರನಿಗೆ ಚಕ್ಕು ಕೊಟ್ಟಿಲ್ಲ.

ಆದ್ದರಿಂದ ಎದುರುದಾರನ ವಿರುದ್ದ ಸಂಜ್ಞೆಯತೆಯನ್ನು ತಗೆದುಕೊಂಡು ಸಮನ್ಸ್ ಹೊರಡಿಸಲು ಪ್ರಾರ್ಥಿಸುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು) ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರ.ದ.ನ್ಯಾದಂ., ಸೇಡಂ.

*SYH